ಶ್ರೀ ಹೆಚ್. ವಿಶ್ವನಾಥಯ್ಯ.—ಸನ್ಮಾನ್ಯ ಅಧ್ಯಕ್ಷರೆ, ಅವರು ಹೇಳಿರುವ ರೀತಿಯಲ್ಲಿ ವಿಳಂಬವಾಗಿರುವುದು ನನಗೂ ಸಹ ಗೋಚರವಾಗಿದೆ. ಈ ವಿಳಂಬಕ್ಕೆ ಯಾರು ಕಾರಣರಾಗಿದ್ದಾರೆ, ಖಂಡಿತವಾಗಿಯೂ ಅಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಕರ್ನಾಟಕ ರಾಜ್ಯದ ಬರಗಾಲ ಪೀಡಿತ ಪ್ರದೇಶಗಳ ಬಗ್ಗೆ

೨೧೬೬. ಶ್ರೀ ಪಂಪಾಪತಿ (ದಾವಣಗೆರೆ).— ಮಾನ್ಯ ಕಂದಾಯ, ಯೋಜನಾ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದ ಬರಗಾಲ ಪೀಡಿತ ಪ್ರದೇಶಗಳಾವುವು, ಹಾಗೂ ಕಂದಾಯ ಮನ್ನಾ ಮಾಡಿದ ಪ್ರದೇಶಗಳಾವುವು ?

ಆ) ಬರಗಾಲ ಪೀಡಿತ ಪ್ರದೇಶಗಳ ಜನರಿಗೆ ಒದಗಿಸಿರುವ ಅನುಕೂಲಗಳಾವುವು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ನೀರಾವರಿ ಸಚಿವರು).—

ಅ) ರಾಜ್ಯದಲ್ಲಿ ಸತತ ಬರಗಾಲ ಪೀಡಿತ ಪ್ರದೇಶಗಳನ್ನು ಗುರುತಿಸಿ ಅವುಗಳನ್ನು ವರ್ಗಾ ಭಾಗಗಳಲ್ಲಿ ವರ್ಗೀಕರಿಸಿದೆ, ಅವುಗಳೆಂದರೆ ಕೇಂದ್ರ ಮತ್ತು ರಾಜ್ಯವಲಯಗಳು ವಿವರಗಳನ್ನು ಅನುಬಂಧದಲ್ಲಿ ನೀಡಿವೆ.

೨. ಕಂದಾಯ ಮನ್ನಾ ಮಾಡುವ ಬಗ್ಗೆ ಯಾವ ವರ್ಷಕ್ಕೆ ಎಂಬುದನ್ನು ಪ್ರಶ್ನೆಯಲ್ಲಿ ನಮೂದಿಸದೆ ಇರುವುದರಿಂದ, ಉತ್ತರಿಸಲಾಗುವುದಿಲ್ಲ.

ಆ) ಬರಗಾಲಕ್ಕೆ ತುತ್ತಾದ ಪ್ರದೇಶಗಳ ಜನರಿಗೆ ಒದಗಿಸುವ ಪರಿಹಾರ ಕಾರ್ಯಕ್ರಮಗಳು ಈ ಕೆಳಕಂಡಂತಿವೆ.—

೧. ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸರಬರಾಜು.

೨) ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಾಗಾಣಿಕೆ.

೩) ಕೆಲಸ ಅರಿಸಿ ಬಂದವರಿಗೆ ಉದ್ಯೋಗ ಒದಗಿಸುವುದು.

೪) ಮೇವು ಪೂರೈಕೆ.

೫) ವಿಶೇಷ ಪೌಷ್ಟಿಕ ಆಹಾರ.

೬) ಆರೋಗ್ಯ ರಕ್ಷಣೆ.

೭) ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೃಷಿ ಕಿರು ಚೀಲಗಳ ವಿತರಣೆ.

೮) ತರಕಾರಿ ಬೆಳೆಗಾಗಿ ಕಿರು ಚೀಲಗಳ ವಿತರಣೆ.

ಅನುಬಂಧ – 1

ರಾಜ್ಯದಲ್ಲಿ ಸತತ ಬರಪೀಡಿತ ಎಂದು ಗುರುತಿಸಿರುವ ಪ್ರದೇಶಗಳ ವಿವರ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಕೇಂದ್ರ ವಲಯ (ಕ್ಷೇತ್ರ)	ರಾಜ್ಯ ವಲಯ (ತಾಲ್ಲೂಕು)
೧	೨	೩	೪
೧.	ಬಿಜಾಪುರ	೧ ಬಾದಾಮಿ ೨ ಬಾಗಲಕೋಟೆ ೩ ಬಾಗೇವಾಡಿ	

೧	೨	೩	೪
		೪ ಬೀಳಗಿ	
		೫ ಬಿಜಾಪುರ	
		೬ ಹುನಗುಂದ	
		೭ ಇಂಡಿ	
		೮ ಮುದ್ದೆಬಿಹಾಳ್	
		೯ ಜಮಖಂಡಿ	
		೧೦ ಮುಧೋಳ್	
		೧೧ ಸಿಂಧಗಿ	
೨.	ಮಂಡ್ಯ	—	ನಾಗಮಂಗಲ
೩.	ಬಳ್ಳಾರಿ	೧ ಹಡಗಲಿ	ಬಳ್ಳಾರಿ
		೨ ಹರಪನಹಳ್ಳಿ	
		೩ ಕೂಡ್ಲಿಗಿ	
		೪ ಮಲ್ಲಾಪುರ (ಹೆಬ್ಬಿ.ಹಳ್ಳಿ)	
		೫ ಸಂಡೂರು	
೪	ಹಾಸನ	—	ಚನ್ನರಾಯಪಟ್ಟಣ ಅರಸೀಕೆರೆ
೫.	ಬೆಳಗಾವಿ	೧ ಅಥಣಿ	ರಾಯಬಾಗ
		೨ ಗೋಕಾಕ	
		೩ ರಾಮದುರ್ಗ	
		೪ ಸೌಂದತ್ತಿ	
೬.	ಚಿತ್ರದುರ್ಗ	೧ ಚಳ್ಳಕೆರೆ	ಹಿರಿಯೂರು
		೨ ಚಿತ್ರದುರ್ಗ	
		೩ ಹೊಸದುರ್ಗ	
		೪ ಜಗಳೂರು	
		೫ ಮೊಳಕಾಲ್ಮೂರು	
		೬ ಹೊಳಲ್ಕೆರೆ	
೭.	ಮೈಸೂರು	—	ಗುಂಡ್ಲುಪೇಟೆ
೮.	ಚಿಕ್ಕಮಗಳೂರು	೧ ಕಡೂರು	ಚಿಕ್ಕಮಗಳೂರು
೯.	ಬೆಂಗಳೂರು	—	ಕನಕಪುರ ದೊಡ್ಡಬಳ್ಳಾಪುರ
೧೦.	ಧಾರವಾಡ	೧ ಹಾವೇರಿ	
		೨ ಕುಂದಗೋಳ	
		೩ ಮುಂಡರಗಿ	
		೪ ರಾಣೆಬೆನ್ನೂರು	
		೫ ರೋಣ	
		೬ ಶಿರಹಟ್ಟಿ	
		೭ ಗದಗ	
		೮ ಬ್ಯಾಡಗಿ	
		೯ ಹಿರೇಕೆರೂರು	

೧	೨	೩	೪
		೧೦ ಹುಬ್ಬಳ್ಳಿ	
		೧೧ ಕಲಘಟಗಿ	
		೧೨ ಧಾರವಾಡ	
		೧೩ ಸಾವನೂರು	
		೧೪ ಶಿಗ್ಗಾಂವ್	
೧೧.	ಕೋಲಾರ	೧ ಬಂಗಾರಪೇಟೆ	
		೨ ಬಾಗೇಪಲ್ಲಿ	
		೩ ಚಿಂತಾಮಣಿ	
		೪ ಗುಡಿಬಂಡೆ	
		೫ ಕೋಲಾರ	
		೬ ಮುಳಬಾಗಿಲು	
		೭ ಶಿಡ್ಲಘಟ್ಟ	
		೮ ಶ್ರೀನಿವಾಸಪುರ	
		೯ ಮಾಲೂರು	
೧೨.	ರಾಯಚೂರು	೧ ಕುಷ್ಟಗಿ	ಕೊಪ್ಪಳ
		೨ ಲಿಂಗಸೂಗೂರು	
		೩ ದೇವದುರ್ಗ	
		೪ ಯಲಬುರ್ಗ	
೧೩.	ತುಮಕೂರು	೧ ಕೊರಟಗೆರೆ	ಗೌಬ್ಬಿ
		೨ ಮಧುಗಿರಿ	
		೩ ಪಾವಗಡ	
		೪ ಸಿರಾ	
		೫ ಚಿಕ್ಕನಾಯಕನಹಳ್ಳಿ	
		೬ ತಿಪಟೂರು	
೧೪.	ಗುಲ್ಬರ್ಗಾ	೧ ಶಹಾಪುರ	ಜೇವರಗಿ
		೨ ಶೋರಾಪುರ	
		೩ ಯಂದ್‌ಗಿರಿ	
		೪ ಅಫ್‌ಜಲ್‌ಪುರ	
		೫ ಚಿತ್ತಾಪುರ	
		೬ ಸೇಡಂ	
		೭ ಆಲಂದ	
		೮ ಗುಲ್ಬರ್ಗಾ	
೧೫.	ಬೀದರ್	೧ ಔರದ್	
		೨ ಬಸವಕಲ್ಯಾಣ	
		೩ ಹುಮನಾಬಾದ್	

ಶ್ರೀ ಪಂಪಾಪತಿ.—ಯಾವ ವರ್ಷದಲ್ಲಿಯೂ ಕಂದಾಯವನ್ನು ಮನ್ನಾ ಮಾಡಿಲ್ಲ. ಬರಗಾಲ ಎಂದು ಘೋಷಣೆಯನ್ನು ಮಾಡಿದರೂ ಆ ಭಾಗದಲ್ಲಿ ಕಂದಾಯವನ್ನು ವಸೂಲು ಮಾಡಿದ್ದಾರೆ.